



ವೈವಿಧ್ಯಮಯ ಸಸ್ಯ ಸಂಕುಲ ಎಕರೆ ಗಟ್ಟಲೆ ಪಾರ್ಕಿನಲ್ಲಿದೆ. ಯೆರ್ಕಾಡ್ ಸುತ್ತಲಿನ ಹಂಗಮ ನೋಟ ವೀಕ್ಷಿಸಲು ಅತೀ ಎತ್ತರದ ಸ್ಥಳಗಳಲ್ಲಿ ಲೇಡೀಸ್ ಸೀಟ್, ಚಿಲ್ಡ್ರನ್ಸ್ ಸೀಟ್ ಮೊದಲಾದ ಹೆಸರಿನ ವ್ಯೂ ಪಾಯಿಂಟ್‌ಗಳಿವೆ.

ವರ್ಷದುದ್ದಕ್ಕೂ ಉತ್ತಮ ಹವಾಗುಣ ಇರುವ ಯರ್ಕಾಡಿನಲ್ಲಿ ಬೇಸಿಗೆಯಲ್ಲಿ ಪ್ರವಾಸಿಗರು ಹೆಚ್ಚು. ಮಧ್ಯಮ ವರ್ಗದ ವಸತಿ ಗೃಹಗಳಿವೆ. ಊಟ, ಉಪಚಾರ ಸಾಮಾನ್ಯ.

## ಹೀಗೂ ಉಂಟೇ!

ಯರ್ಕಾಡಿನ ಅತೀ ಎತ್ತರದ ಪ್ರದೇಶದಲ್ಲಿ ಬುಡಕಟ್ಟು ಜನರು ಪೂಜಿಸುವ ಪುಟ್ಟ ಗುಹಾ ದೇವಾಲಯವೊಂದಿದೆ. ಈ ಪ್ರದೇಶದಲ್ಲಿ ನೀರೇ ಇರಲಿಲ್ಲವಂತೆ. ಸರ್ವರಾಯ ಎಂಬ ಸಂತ ತಪಸ್ಸುಗೈದು ಕಾವೇರಿ ನೀರನ್ನು ಇಲ್ಲಿಗೆ ತರಿಸಿದನೆಂದು ಇಲ್ಲಿನ ಪೂಜಾರಿಣಿ ತಮಿಳಿನಲ್ಲಿ ಕಾವೇರಿಗೂ ಯೆರ್ಕಾಡಿಗೂ ಇರುವ ನೆಂಟಸ್ತಿಕೆಯನ್ನು ವಿವರಿಸಿದಳು. ಈ ಗುಹೆಯುದ್ದಕ್ಕೂ ಹೋದರೆ ಕಾವೇರಿ ಉಗಮಸ್ಥಾನಕ್ಕೆ ಹೋಗಬಹುದೆಂದು ಹೇಳಿದಳು! 'ಹೀಗೂ ಉಂಟೆ!' ಎಂದು ಮನಸ್ಸಿನಲ್ಲೇ ಅಂದು ಕೊಂಡೆ!

ಇಲ್ಲಿಯ ಪರ್ವತ ಸಾಲುಗಳಿಗೆ ಇದೇ ಸರ್ವರಾಯನ ಹೆಸರು. ಬ್ರಿಟಿಷರ ಬಾಯಲ್ಲಿ ಇದು ಸೆವ್‌ರಾಯ್ ಹಿಲ್ಸ್ ಎಂದಾಗಿರಬೇಕು.

### ಹೇಗೆ ಹೋಗಬೇಕು?

ಬೆಂಗಳೂರು, ಮಂಗಳೂರಿನಿಂದ ಸೇಲಂಗೆ ಬಸ್ ಅಥವಾ ರೈಲು ಇದೆ.

ಸೇಲಂನಿಂದ ಯೆರ್ಕಾಡಿಗೆ ವಾಹನ ಸೌಕರ್ಯವಿದೆ.